ಕಥೆ

# ಹೊಳಪು

 

ಮೂಲ ಗುಜರಾತಿ: **ದಿಲೀಪ್ ರಾಣ್‌ಪುರ**

ಹಿಂದಿಯಿಂದ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**

ಕಲೆ: ಸಂತೋಷ್ ಸಸಿಹಿತ್ಲು

ಶಿಕ್ಷಣ ಇಲಾಖೆಯ ನಿರೀಕ್ಷಕರಾದ ಲಾಮೂ ಭಾಯಿ ಶಾಲೆಯ ಹೊಸ್ತಿಲ ಬಳಿ ಬಂದು ನಿಂತರು. ಆ ಮಣ್ಣಿನ ಶಾಲೆಯ ಗೋಡೆಗಳಿಂದ ಗಾರೆಯ ಹೊರ ಭಾಗ ಕಿತ್ತು ಹೋಗಿತ್ತು. ಅಂಗಳದಲ್ಲಿ ಹೊಂಡಗಳಾಗಿದ್ದವು. ಒಂದು ಹೊಂಡದಲ್ಲಿ ನಾಯಿ ಮರಿಯೊಂದು ಮುದುಡಿ ಬಿದ್ದಿದೆ. ಹೊಸ್ತಿಲ ಒಂದು ಭಾಗದಲ್ಲಿ ಕುರಿಗಳ ಹಿಕ್ಕೆ ಬಿದ್ದಿವೆ. ಒಳಗಿನ ಕೋಣೆಯಲ್ಲಿ ಕೊಳಕಾಗಿದ್ದ ಹತ್ತು-ಹನ್ನೆರಡು ಮಕ್ಕಳು ಗಲಾಟೆ ಮಾಡುತ್ತಿದ್ದಾರೆ. ಅವರ ಪುಸ್ತಕಗಳ ಚೀಲಗಳು ಸಹ ಕೊಳಕಾಗಿವೆ. ಮಕ್ಕಳು ಪುಸ್ತಕವನ್ನು ಓದುತ್ತಿಲ್ಲ, ಸ್ಲೇಟಿನಲ್ಲಿ ಬರೆಯುತ್ತಲೂ ಇರಲಿಲ್ಲ. ಅವರ ಸಂಸ್ಕಾರ-ವಿಹೀನ ಮಾತುಗಳು ಅಶುದ್ಧ ಉಚ್ಚಾರಣೆಯಲ್ಲಿ ಕೇಳಿ ಬರುತ್ತಿವೆ. ಅವರ ಶರೀರದಲ್ಲಿ ಕೊಳಕಿನ ಮೇಲ್ಪೈ ಇದೆ. ಕೆಲವು ಮಕ್ಕಳ ಮೂಗಿನ ಸಿಂಬಳ ತುಟಿಗಳ ಸಮೀಪಕ್ಕೆ ಬರುತ್ತಿದ್ದರೆ, ಇನ್ನು ಕೆಲವು ಮಕ್ಕಳ ಕಣ್ಣುಗಳ ಅಂಚಿನಲ್ಲಿ ಪಿಚ್ಚೆಯಿದೆ. ಅವರ ತಲೆಕೂದಲುಗಳು ಕೊಳಕಾಗಿವೆ. ಮಕ್ಕಳು ಕಿರುಚುತ್ತಿದ್ದಾರೆ, ತುಂಟಾಟ ಮಾಡುತ್ತಿದ್ದಾರೆ. ಮಕ್ಕಳು ಇದುವರೆಗೆ ಶಿಕ್ಷಣ ನಿರೀಕ್ಷಕರನ್ನು ಗಮನಿಸಿಲ್ಲ; ಗಮನಿಸಿದ್ದರೆ ಮಕ್ಕಳು ಅಪರಿಚಿತರನ್ನು ನೋಡಿ ಹೆದರುತ್ತಿದ್ದರು.

ಕೋಣೆಯಲ್ಲಿ ಮೇಸ್ಟ್ರು ಇರುವಂತೆ ತೋರುತ್ತಿಲ್ಲ. ನಿರೀಕ್ಷಕರು ಮುಂದಕ್ಕೆ ಬಂದು ಬಾಗಿಲ ಬಳಿ ನಿಲ್ಲುತ್ತಾರೆ. ಒಬ್ಬ ಹುಡುಗ ರೋದಿಸುತ್ತಾ ಮೂಗನ್ನು ಒರೆಸಿಕೊಳ್ಳುತ್ತಿದ್ದಾನೆ. ಮಕ್ಕಳು ಅಪರಿಚಿತರನ್ನು ನೋಡಿ ಮೌನ ವಹಿಸುತ್ತಾರೆ. ನಿರೀಕ್ಷಕರು ಮುಂದಕ್ಕೆ ಬರುತ್ತಾರೆ; ತಮ್ಮ ಬ್ಯಾಗನ್ನು ಟೇಬಲ್ ಮೇಲಿಟ್ಟು, ಮತ್ತೊಮ್ಮೆ ಕೋಣೆಯನ್ನು ನೋಡುತ್ತಾರೆ.

ಬ್ಲ್ಯಾಕ್‌ಬೋರ್ಡಿನಲ್ಲಿ ಜಮಾಯಿಸಿದ್ದ ದೂಳನ್ನು ಸ್ವಚ್ಛ ಮಾಡಿಲ್ಲ. ನೀರಿನ ಮಡಿಕೆ ಕೊಳಕಾಗಿದೆ. ಅದರ ಮೇಲಿದ್ದ ಲೋಟ ಸಹ ಕೊಳಕಾಗಿದೆ. ಅದನ್ನು ನೋಡಿದರೆ ಜುಗುಪ್ಸೆಯಾಗುತ್ತದೆ.

ಲಾಮೂ ಚಿಂತಾಕ್ರಾಂತರಾಗುತ್ತಾರೆ. ಇದು ಶಾಲೆಯೇ! ಅದೂ ನನ್ನ ಕ್ಷೇತ್ರಕ್ಕೆ ಸಂಬಂಧಿಸಿದ ಶಾಲೆಯ ಸ್ಥಿತಿ ಹೀಗಿದೆಯೇ! ಮೇಸ್ಟ್ರು ಎಲ್ಲೂ ಕಾಣಿಸುತ್ತಿಲ್ಲ! ಈ ಮೇಸ್ಟ್ರು ಒಂದು ತಿಂಗಳ ಮೊದಲು ವರ್ಗಾವಣೆ ಮಾಡಿಸಿಕೊಳ್ಳಲು ಬಂದಿದ್ದು ನೆನಪಾಯಿತು.